ಮಂದಹಾಸ

# ಕನ್ನಡಕಕ್ಕಾಗಿ ಒಂದನ್ನು ಒತ್ತಿ!



■ ಸುಮಾ ರಮೇಶ್
ಕಲೆ: ಈಶ್ವರ ಬಡಿಗೇರ

ಮೊನ್ನೆ ಪೇಪರ್ ಓದುತ್ತಾ ಕಾಫಿ ಕುಡಿಯುತ್ತಿದ್ದೆ. ಕಾಫಿಯ ಸ್ವಾದ ನಾಲಿಗೆಗಿಳಿದಾಗಲೇ ಸುದ್ದಿಯ ಸ್ವಾದವೂ ಮೆದುಳಿನಲ್ಲಿ ಮನನವಾಗುವುದು. ಬಿಸಿಯಾದ ಕಾಫಿಯ ಹಬೆ ಗಾಜನ್ನಾವರಿಸಿ ಅಕ್ಷರಗಳು ಅಸ್ಪಷ್ಟವಾದಾಗ, ‘ಛೇ! ಕನ್ನಡಕಕ್ಕೂ ವೈಪರ್ ಇದ್ದಿದ್ದರೆ...’ ಎನಿಸಿತು. ಕಣ್ಣಿಗೆ ಚಾಳೀಸಿನ ಕೊಡುಗೆ ಬರುವವರೆಗೂ ನೆಮ್ಮದಿಯಾಗಿ ಕಾಫಿ ಹೀರುತ್ತಾ ಸುದ್ದಿಯ ಸ್ವಾದವನ್ನು ಆಸ್ವಾದಿಸುತ್ತಿದ್ದೆ. ಈಗ ಎರಡೆರಡು ಕೆಲಸ ಒಟ್ಟಿಗೆ ಮಾಡುವಂತಿಲ್ಲ. ಓದುವಾಗ ಯಾರಾದರೂ ಮಾತನಾಡಿಸಿದರೆ ರೀಡಿಂಗ್ ಗ್ಲಾಸ್ ಹಣೆಗೇರಿಸಿ ಉತ್ತರಿಸಬೇಕು. ಇಲ್ಲದಿದ್ದರೆ ಅವರ ಆಕೃತಿಯೂ ಮಬ್ಬು ಮಬ್ಬು.

ಪಂಚೇಂದ್ರಿಯಗಳಿಗೆಲ್ಲಾ ಧಾರಾಳವಾಗಿ ಗಾಳಿಯಾಡಲು ಬಿಟ್ಟೇ ಅಭ್ಯಾಸವಿರುವ ನನಗೆ ಈಗ ಮೂಗು ಬಾಯಿಗೆ ಮಾಸ್ಕನ್ನೂ, ಕಣ್ಣಿಗೆ ಚಾಳೀಸನ್ನೂ ಧರಿಸುವ ಸಂಕಟ. ಚಿಕ್ಕಂದಿನಿಂದಲೂ ಕೊರೆಯುವ ಚಳಿಯಲ್ಲೂ ಟೋಪಿ, ಸ್ಕಾರ್ಫ್, ಸ್ವೆಟರ್ ಧರಿಸಿಕೊಳ್ಳದೆ ಬಚಾವಾಗಿದ್ದವಳು ಈಗ ಈ ಬ್ಯಾರಿಕೇಡ್‌ಗಳಿಂದ ಬಂಧಿಸಲ್ಪಟ್ಟಿರುವೆ. ನಲವತ್ತರ ನಂತರ ಪ್ರಾರಂಭವಾದ ಈ ಬೆಳವಣಿಗೆ ಮೊದಲಿಗೆ ಜೀರೋ ಪಾಯಿಂಟ್ ಟೂ ಫೈವ್ ಪವರ್‌ನಿಂದ ಶುರುವಾಗಿ ನನ್ನ ವಯಸ್ಸು ಏರುತ್ತಾ ಹೋದಂತೆ ಪಾಯಿಂಟ್ ಫೈವ್... ಒನ್... ಒನ್ ಪಾಯಿಂಟ್ ಫೈವ್ ಎನ್ನುತ್ತಾ ಟೂಗೆ ಬಂದು ನಿಂತಿದೆ. ನನ್ನ ಪತಿ ಯಾವಾಗಲೂ ‘ಬೆಳಕಿನಲ್ಲಿ ಕುಳಿತು ಓದಿದರೆ ಯಾವ ಕನ್ನಡಕವೂ ಬೇಡ. ಮೊಬೈಲಿನಲ್ಲಿ ಎಲ್ಲವನ್ನೂ ಜೂಮ್ ಮಾಡಿ ಓದು... ಸುಮ್ನೇ ಆಗಾಗ ಐ ಸ್ಪೆಷಲಿಸ್ಟ್ ಬಳಿ ಹೋಗಿ ಇಎಮ್‌ಐ ಯಾಕೆ ಕಟ್ತೀಯಾ?’ ಎಂದು ದೂರುವರು. ಮೊಬೈಲಿನಲ್ಲೇನೋ ಜೂಮ್ ಮಾಡಿ ಓದಬಹುದು. ಪುಸ್ತಕದಲ್ಲಿರುವ ಅಕ್ಷರಗಳನ್ನು ಜೂಮ್ ಮಾಡೋದ್ಹೇಗೆ? ಕೈ ಮಸೂರ (ಹ್ಯಾಂಡ್ ಲೆನ್ಸ್) ಬಳಸಬೇಕಷ್ಟೇ.

ಮೊಬೈಲ್ ಅನ್ನು ಆಗಾಗ ಎಲ್ಲೆಲ್ಲೋ ಇರಿಸಿ ಹುಡುಕಲಾರದೆ ಕೊನೆಗೆ ನನ್ನವರ ಮೊಬೈಲಿನಿಂದ ಮಿಸ್ ಕಾಲ್ ಕೊಡಿಸಿ, ಶಬ್ದವೇಧಿ ವಿದ್ಯೆ ಕಲಿತವಳಂತೆ ಅದನ್ನಾಲಿಸುತ್ತಾ ಸಾಗುವುದು ನಮ್ಮ ಮನೆಯಲ್ಲಿ ಸಾಮಾನ್ಯವಾಗಿ ಕಂಡು ಬರುವ ದೃಶ್ಯ. ಈಗೀಗ ಆ ಲಿಸ್ಟ್‌ಗೆ ನನ್ನ ಕನ್ನಡಕವೂ ಸೇರಿದೆ. ಕನ್ನಡಕಕ್ಕಾಗಿ ಅಲ್ಲಲ್ಲಿ ತಡಕಾಡುವಾಗ ‘ಕನ್ನಡಕ್ಕಾಗಿ ಒಂದನ್ನು ಒತ್ತಿ’ ಎಂಬಂತೆ ಕನ್ನಡಕಕ್ಕಾಗಿ ಮಿಸ್ ಕಾಲ್ ಕೊಡುವ ವ್ಯವಸ್ಥೆ ಇರಬೇಕಿತ್ತೆಂದು ಪೇಚಾಡಿಕೊಳ್ಳುವೆ.

ಈ ಬಾರಿ ನನ್ನ ರೀಡಿಂಗ್ ಗ್ಲಾಸ್‌ನಲ್ಲಿ ಅಕ್ಷರಗಳು ಸ್ವಲ್ಪ ಅಸ್ಪಷ್ಟವಾದಾಗ ಮತ್ತೆ ಗ್ಲಾಸ್ ಚೇಂಜ್ ಮಾಡಬೇಕೇನೋ ಎನಿಸಿತು. ನಮ್ಮ ರೆಗ್ಯುಲರ್ ಆಫ್ತಾಲ್ಮಾಲಜಿಸ್ಟ್ ಬೇರೆ ಊರಿಗೆ ಶಿಫ್ಟ್ ಆಗಿದ್ದರಿಂದ ಹೊಸಬರ ಬಳಿ ಹೋಗುವಂತಾಯಿತು. ಹೊಸ ಶಾಪಿನ ಬಾಗಿಲಲ್ಲೇ ನನ್ನವರು, ‘ಇವರು ವೈದ್ಯರಾ ಅಥವಾ ರಿಫ್ರ್ಯಾಕ್ಷನಿಸ್ಟಾ ಎಂದು ಅನುಮಾನ ಬರ್ತಿದೆ. ಎಲ್ಲೂ ಅವರ ಬೋರ್ಡ್ ಕಾಣ್ತಿಲ್ವಲ್ಲಾ’ ಎಂದರು. ‘ಬನ್ನಿ ಪರ್ವಾಗಿಲ್ಲ, ಇಲ್ಲೆಲ್ಲಾ ಇಷ್ಟೊಂದು ಸ್ಪೆಕ್ಸ್ ಡಿಸ್ಪ್ಲೇ ಮಾಡಿದ್ದಾರಲ್ಲ ಸೇಲ್‌ಗೆ’ ಎನ್ನುತ್ತಾ ಒಳನಡೆದೆ.

ನನ್ನನ್ನು ಪರೀಕ್ಷಿಸಿದ ಹೊಸ ವೈದ್ಯರು ‘ನಿಮಗೆ ದೂರದ ವಸ್ತು ಕೂಡಾ ಸ್ವಲ್ಪ ಬ್ಲರ್ ಆಗ್ತಿದೆ. ಅದಕ್ಕೆ ಜೀರೋ ಪಾಯಿಂಟ್ ಫೈವ್ ದು ಗ್ಲಾಸ್ ಬೇಕಾಗುತ್ತೆ. ರೀಡಿಂಗ್‌ಗೆ ಸ್ವಲ್ಪ ಹಳೆಯದಕ್ಕಿಂತ ಪವರ್ ಜಾಸ್ತಿ ಇರುವ, ಅಂದ್ರೆ ಟೂ ಪಾಯಿಂಟ್ ಟೂ ಫೈವ್ ಲೆನ್ಸ್ ಎರಡೂ ಸೇರಿಸಿ ಪ್ರೊಗ್ರೆಸಿವ್ ಲೆನ್ಸ್ ಕೊಡ್ತೀನಿ’ ಎಂದರು. ನನ್ನ ಬರವಣಿಗೆಯಲ್ಲಿ ಅಂತಾ ಪ್ರೊಗ್ರೆಸ್ ಇರದಿದ್ದರೂ ಪವರ್‌ನಲ್ಲಿ ಪ್ರೊಗ್ರೆಸ್ ಇರುವುದರಿಂದ ಅವರು ಸಜೆಸ್ಟ್ ಮಾಡಿದ ಲೆನ್ಸ್‌ಗೆ ಅಸ್ತು ಎಂದೆ. ‘ಟೀವಿ ಹಾಗೂ ಮೊಬೈಲ್‌ನ ಬ್ಲೂರೇಸ್‌ನಿಂದ ಕಣ್ಣಿಗೆ ಹಾನಿಯಾಗದಂತೆ ಆಂಟಿ ಬ್ಲೂ ರೇ ಗ್ಲಾಸಸ್ ಕೊಡ್ತೀನಿ. ಇದು ಡಿಜಿಟಲ್ ಐ ಸ್ಟ್ರೇನ್ ಅವಾಯ್ಡ್ ಮಾಡುತ್ತೆ’ ಎಂದರು. ಅದರ ದುಬಾರಿ ವೆಚ್ಚವನ್ನು ಕೇಳಿ ಹಿಂತೆಗೆಯುವಂತಾದರೂ ಕಣ್ಣಿನ ಆರೋಗ್ಯದ